*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಮಂತ್ರಿಗಳು ಬೋರ್‌ವೆಲ್‌ನಲ್ಲಿ ಏಕೆ ಬೀಳುವುದಿಲ್ಲ?*



ಹತ್ತು ಬೋರ್‌ವೆಲ್‌ಗಳಷ್ಟು ವೃತ್ತಾಕಾರದ ಹೊಟ್ಟೆ ಇರುವುದರಿಂದ.

*ವಿ.ವಿಜಯೇಂದ್ರ ರಾವ್, ನೈವೇಲಿ*
*ಯಡ್ಡಿ-ರೆಡ್ಡಿ ಜಗಳದಲ್ಲಿ ಪಾಪ, ಶೋಭೆಯ ಶೋಭೆ ನಾಪತ್ತೆಯಾಯ್ತಲ್ಲ ರಾಮಣ್ಣ?*
ಆಳುವ ಗಂಡು ಎಂದುಕೊಂಡು ಅಳುವ ಗಂಡನ್ನು ನಂಬಿ ಹಾಳಾದರಾಕೆ, ಪಾಪ!

*ಲಕ್ಷ್ಮಿ ಎಸ್. ಮೆಳ್ಳಗೇರಿ, ಗಿರಗಾಂವ*
*ಗಂಡಸಿನ ಯಶಸ್ಸಿಗೆ ಹೆಣ್ಣು ಕಾರಣವಾದರೂ ಗಂಡಸರಿಗೆ ಬೇರೆಬೇರೆ ಹೆಂಗಸರ ವ್ಯಾಮೋಹವೇಕೆ?*
ಬೇರೆಬೇರೆ ವಿಧದ ಯಶಸ್ಸು ಪಡೆಯಲು!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಗುಡಿಯಲ್ಲಿ ಕೊಡುವ ತೀರ್ಥಕ್ಕೂ, ಬಾರ್‌ನಲ್ಲಿ ಕೊಡುವ ತೀರ್ಥಕ್ಕೂ ಏನು ವ್ಯತ್ಯಾಸ?*
ಅದರಿಂದ ಜಠರಕ್ಕೆ ಮೇಲು, ಇದರಿಂದ ವಠಾರಕ್ಕೇ ಗೋಳು!

*ಕೆ. ಮಹಮದ್ ರಫಿ, ಕೊಟ್ಟೂರು*
*ನೊಬೆಲ್ ಶಾಂತಿ ಪ್ರಶಸ್ತಿಯು ಗಾಂಧೀಜಿಗೆ ಒಂದು ಮರೀಚಿಕೆಯಾಗಿಯೇ ಉಳಿದಿರಲು ಕಾರಣವೇನು?*
ಅದರ ಅಗತ್ಯ ಅವರಿಗಿಲ್ಲ; ಗಾಂಧಿ ಆ ಪ್ರಶಸ್ತಿಗಿಂತಲೂ ಹಿರಿಯರು.

*ಮಾಲತಿರಾಜು, ಬೆಂಗಳೂರು*
*ಅಳೋ ಗಂಡಸನ್ನು, ನಗೋ ಹೆಂಗಸನ್ನು ನಂಬಲೇಬೇಡ ಅಂತಾರೆ; ನೀವೇನಂತೀರಿ?*



ಗೌಡರನ್ನೂ, ಶೋಭಾರನ್ನೂ ಕೇಳಿ ಹೇಳುತ್ತೇನೆ.

*ಜಾಕೋಬ್ ಡಿಸೋಜ, ಕುರುವಳ್ಳಿ*
*ಜೀವನದಲ್ಲಿ ನಿಜವಾದ ಸಂತೋಷ ಯಾವಾಗ ಸಿಗುತ್ತದೆ?*
ನಮ್ಮ ನೆರೆಹೊರೆಯವರು ಹಾಳಾದಾಗ!

*ವಿ. ಹಮೀದ್, ವಿಟ್ಲ*
*ವಾಚ್ ಇಲ್ಲದಿರುತ್ತಿದ್ದರೆ ಏನಾಗುತ್ತಿತ್ತು ಸಾರ್?*
ವಾಚ್‌ಮನ್ ಇರುತ್ತಿರಲಿಲ್ಲ!

*ಪಿ. ಗೋವಿಂದರಾಜ್, ಶಿವಮೊಗ್ಗ*
*ಹಣ ಇದ್ದಕಡೆ ಗೆಳೆಯರು, ಸಕ್ಕರೆ ಇದ್ದಕಡೆ ಇರುವೆಗಳು, ಸುಂದರ ಹುಡುಗಿಯರು ಇದ್ದಕಡೆ?*
ಫ್ಯಾಷನ್ ಡಿಸೈನರ್‌ಗಳು, ಬ್ಯೂಟಿಷಿಯನ್‌ಗಳು!

*ಕೆ.ವಿ.ಶಿವಕುಮಾರ್, ಕಾಳಿಹುಂಡಿ*
*ಜೀವನದ ಹೋರಾಟದಲ್ಲಿ ಗೆಲುವು ಸಿಗಬೇಕಾದರೆ ಏನು ಮಾಡಬೇಕು ಸಾರ್?*
ಹೋ ಎಂದು ಕೂಗಾಡದೆ ನೆಮ್ಮದಿಯ ನೂಲಿನ ರಾಟೆಯನ್ನು ಕೈಗೆತ್ತಿಕೊಳ್ಳಬೇಕು.

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ಲಾ ಸ್ವಾಮಿ, ಹೆಣ್ಣಿನ ಕಣ್ಣಿನ ನೋಟಕ್ಕೆ ಮರುಳಾಗದವರು ಯಾರಾದರೂ ಇದ್ದಾರೆಯೇ?*
ಇದ್ದಾರಲ್ಲಾ..... ಹೆಣ್ಣುಗಳು!

*ಮಹಾವೀರ ಕಾಸಾರ, ಚನ್ನಗಿರಿ*
*ತಿಮ್ಮಪ್ಪನಿಗೆ ಆದಾಯ ತೆರಿಗೆ, ಆಸ್ತಿ ಮಿತಿ ಇಲ್ಲವೇ?*
ದುಡಿಯದೇ ಬಂದುದಕ್ಕೆ ಮಿತಿ ಇರುವುದಿಲ್ಲ.

*ಕೆ.ಮೈಥಿಲಿಕೃಷ್ಣ, ಬೆಂಗಳೂರು*
*ಅತ್ಯುತ್ತಮ ದೇಶಸೇವೆ ಮಾಡುವುದಕ್ಕೆ ಯಾವುದು ಲಾಯಕ್ಕು? ರಾಜಕೀಯವೋ, ಸನ್ಯಾಸತ್ವವೋ?*
ಮನುಷ್ಯತ್ವ!

*ನಾರಾಯಣ, ಗುಗ್ಗರಹಟ್ಟಿ*
*ಮಾತೆತ್ತಿದರೆ ಕತ್ತೆಗಾಗುವಷ್ಟು ವಯಸ್ಸಾಯ್ತು ಎನ್ನುತ್ತಾರೆ; ಕತ್ತೆಯ ವಯಸ್ಸೆಷ್ಟೆಂದರೆ ಗೊತ್ತಿಲ್ಲ ಎನ್ನುತ್ತಾರೆ...?*
ಸರಿಯೇ. ಕತ್ತೆಗೆ ಜಾತಕ, ಬರ್ತ್ ಸರ್ಟಿಫಿಕೇಟ್‌ಗಳು ಇರುವುದಿಲ್ಲವಲ್ಲ!

*ಖಲಂದರ್ ಶಾಹಿದ್ ಅಲ್ ಮುಬಾರಕ್, ಜಾವಗಲ್*
*ಪಂಜಾಬ್‌ನಲ್ಲಿ ಅಪ್ಪ ಮುಖ್ಯಮಂತ್ರಿ, ಮಗ ಉಪಮುಖ್ಯಮಂತ್ರಿ; ಕರ್ನಾಟಕದಲ್ಲಿ ಅಪ್ಪ ಮುಖ್ಯಮಂತ್ರಿ; ಮಗ?*
ಮುಖ್ಯತಂತ್ರಿ!

*ಲಕ್ಷ್ಮಿ ಆರ್, ಕಡೂರು*
*ಚಿಕಿತ್ಸೆ ನೀಡಲು ಬಂದ ವೈದ್ಯರೇ ಕೆಮ್ಮುತ್ತಿದ್ದಾರಲ್ಲಾ...?*
ದುಂಡಿರಾಜ್ ಹೇಳುವಂತೆ ಪೆಹಲೆ ಬೋಲ್ನೇ ದೋ ಹಮ್ಕೋ, ಬಾದ್ ಮೇ ಎಷ್ಟು ಬೇಕೋ ಕೆಮ್ಕೋ ಎಂದು ಹೇಳಿ ನೋಡಿ!

## ಬಹುಮಾನಿತ ಪ್ರಶ್ನೆ

*ಜೆ.ಪ್ರದೀಪಕುಮಾರ, ಹೂವಿನಹಡಗಲಿ*
*ಅಧ್ಯಯನ ಮಾಡದೆ ನೇರವಾಗಿ ಪರೀಕ್ಷೆ ಎದುರಿಸುವವರಿಗೆ ನಿಮ್ಮ ಸಲಹೆ ಏನು?*
ಕಾಪಿ ಮಾಡಲು ಬೇಕಾದ ಸೂಕ್ಷ್ಮದೃಷ್ಟಿಯನ್ನು ಬೆಳೆಸಿಕೊಳ್ಳಿ!

*ಡಿ.ಎಲ್. ನಾಗರಾಜ್, ಹರಪನಹಳ್ಳಿ*
*ಕತೆಗಳಲ್ಲಿ ಯಾವ ಕತೆ ಮೇಲು?*
ಸಾರ್ಥಕತೆ!

*ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ*
*ಕೆಲವರನ್ನು ಹಿತ್ತಾಳೆ ಕಿವಿ ಎನ್ನುವರಲ್ಲಾ, ಏಕಿರಬಹುದು?*
ಆ ಕಿವಿಗೆ ಏನಾದರೂ ಹೇಳಿದವರ ಹಿತ ಹಾಳೇ; ಆದ್ದರಿಂದ ಹಿತ್ತಾಳೆ!

*ಎ.ಎಸ್.ಸ್ವಾಮಿ, ಶೋರಾಪುರ*
*ನಮ್ಮ ಜೀವನನಾವೆಯ ದಿಕ್ಸೂಚಿ ಯಾವುದು?*



ಥೂ, ಛೀ ಎನ್ನಿಸಿಕೊಳ್ಳದ ಯಾವ ದಿಕ್ಕಾದರೂ ಆದೀತು.

*ಎ.ಎಸ್. ಸ್ವಾಮಿ, ಶೋರಾಪುರ*
*ಕೊನೆಗೆ ವೈದ್ಯರೂ ದೇವರ ಮೇಲೆ ಭಾರ ಹಾಕುವುದೇಕೆ?*
ತಮ್ಮ ಮೇಲೆಯೇ ಭಾರ ಹಾಕಿಕೊಂಡರೆ ಕೋರ್ಟು, ಕಚೇರಿ ಅಲೆಯಬೇಕಾಗುತ್ತದಲ್ಲ!

*ಸುನಂದಮ್ಮ, ಗೌರಿಬಿದನೂರು*
*ಅಕಸ್ಮಾತ್ ನಿಮ್ಮ ಮುಂದೆ ದೇವರು ಪ್ರತ್ಯಕ್ಷನಾಗಿಬಿಟ್ಟರೆ ಏನು ಮಾಡುವಿರಿ?*
ಮೂರ್ಛೆ ಬೀಳುತ್ತೇನೆ.

■ ರಾಮ್